CoverageReport: TCS IT Wiz – Bangalore Edition

**Publication:**VaarthaBharti
**Date:** 08/08/2014
**Edition:** Bangalore
**Page No:** 2
**Headline:** St. Pauls wins IT Wiz quiz contest

## ‘ಟಿಸಿಎಸ್ ಐಟಿ ವಿಝ್-2014’
# ಸೇಂಟ್ ಪಾಲ್ಸ್ ಶಾಲೆಗೆ ಪ್ರಶಸ್ತಿ

ಬೆಂಗಳೂರು, ಆ. 7: ನಗರದ ವೈಯಾಲಿಕಾವಲ್‌ನಲ್ಲಿನ ಚೌಡಯ್ಯ ಸ್ಮಾರಕ ಸಭಾಂಗಣದಲ್ಲಿ ನಡೆದ ‘ಟಿಸಿಎಸ್ ಐಟಿ ವಿಝ್’ನಲ್ಲಿ (ದೇಶದ ಮುಂಚೂಣಿ ಐಟಿ ಕಂಪೆನಿ ಟಾಟಾ ಕನ್ಸಲ್ಟೆನ್ಸಿ ಸರ್ವಿಸಸ್- ಟಿಸಿಎಸ್- ಮಾಹಿತಿ ತಂತ್ರಜ್ಞಾನ ಆಧರಿಸಿ ಆಯೋಜಿಸಿದ ಭಾರತದಲ್ಲೇ ಅತ್ಯಂತ ದೊಡ್ಡ ಮಟ್ಟದ ಬುದ್ಧಿಮತ್ತೆ ಪರೀಕ್ಷಾ ರಸಪ್ರಶ್ನೆ ಸ್ಪರ್ಧೆ) ನಗರದ ವಿವಿಧೆಡೆಯ ಶಾಲೆಗಳು 1,100ಕ್ಕೂ ಅಧಿಕ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

ಪ್ರಾದೇಶಿಕ ವಲಯದ ಈ ಅಂತಿಮ ಸುತ್ತಿನ ಸ್ಪರ್ಧೆಯಲ್ಲಿ ಸೇಂಟ್ ಪಾಲ್ಸ್ ಶಾಲೆಯ ವಿದ್ಯಾರ್ಥಿಗಳಾದ ಹರಿಕೃಷ್ಣ ಸಿದ್ಧಾರ್ಥ ವಿಜಯಿಯಾಗಿ ಪ್ರಶಸ್ತಿಗೆ ಪಾತ್ರರಾದರು. ಈ ವರ್ಷದ ಪ್ರಾದೇಶಿಕ ವಲಯದ ಅಂತಿಮ ಸ್ಪರ್ಧೆಯ ಈ ವಿಜೇತರಿಬ್ಬರೂ ಒಂದೊಂದು ಐಪಾಡ್ ಏರ್ ಉಪಕರಣವನ್ನು ಬಹುಮಾನವಾಗಿ ಪಡೆದುಕೊಂಡರು. ರನ್ನರ್ ಅಪ್ ಪ್ರಶಸ್ತಿ ಪಡೆದ ಶ್ರೀ ಕುಮಾರನ್ ಶಾಲೆಯ ವಿದ್ಯಾರ್ಥಿಗಳಾದ ಭಾರ್ಗವ, ಅಭಿಷೇಕ್ ಐಪಾಡ್ ಮಿನಿ ಸಾಧನವನ್ನು ಬಹುಮಾನವಾಗಿ ಪಡೆದುಕೊಂಡರು. ಜೊತೆಗೆ, ವಿಶೇಷವಾಗಿ ವಿನ್ಯಾಸಗೊಳಿಸಿದ ಟಿಸಿಎಸ್ ಐಟಿ ವಿಜ್ ಪ್ರಶಸ್ತಿ ಫಲಕ ಮತ್ತು ಪದಕಗಳನ್ನೂ ಸ್ವೀಕರಿಸಿದರು. ಅಷ್ಟೇ ಅಲ್ಲದೇ, ಟಿಸಿಎಸ್ ಕಂಪೆನಿಯ ವತಿಯಿಂದ ಕೊಡಲಾದ ಸ್ಪೇಸ್ ಪ್ಯಾಕ್, ಸಿಪ್ಪರ್ಸ್, ಈಯರ್ ಫೋನ್, ಯುಎಸ್‌ಬಿ ಪೆನ್ ಡ್ರೈವ್, ಸ್ಪೀಕರ್ಸ್ ಮತ್ತಿತರ ಉತ್ತೇಜಕ ಬಹುಮಾನಗಳನ್ನೂ ಸ್ವೀಕರಿಸಿ ಸಂತೋಷಪಟ್ಟರು.

ನಂತರ ನಡೆದ ಆಕರ್ಷಕ ಬಹುಮಾನ ವಿತರಣೆ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿದ್ದ ಕ್ರಿಕೆಟ್ ಪಟು ಎಲ್.ಕೆ. ರಾಹುಲ್ ಅವರು ಟಿಸಿಎಸ್ ಐಟಿ ವಿಜ್‌ನ ವಿಜೇತ ಸ್ಪರ್ಧಿಗಳಿಗೆ ಬಹುಮಾನ ವಿತರಿಸಿದರು.